# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 71 | Pages. 2 | Date: 14-02-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 71 – ಪುಟಗಳು : 2 | 14-02-2026 ಶನಿವಾರ | Ph: 8762954248 | ದರ : ₹1


# ಅನ್ನ ಸುವಿಧಾ ಯೋಜನೆ ಸಮರ್ಪಕ ಅನುಷ್ಠಾನಕ್ಕೆ ಸೂಚನೆ

## ನಾಗರಿಕರಿಗೆ ಪಡಿತರ ಲಭ್ಯವಾಗಬೇಕು | ಸಚಿವ ಕೆ.ಎಚ್.ಮುನಿಯಪ್ಪ ನಿರ್ದೇಶನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಿರಿಯ ನಾಗರಿಕರ ಮನೆ ಬಾಗಿಲಿಗೆ ಪಡಿತರ ತಲುಪಿಸಲು ಜಾರಿಗೊಳಿಸಿರುವ ಅನ್ನ ಸುವಿಧಾ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ.ಹೆಚ್.ಮುನಿಯಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಆಹಾರ ಮತ್ತು ನಾಗರಿಕ ಸರಬರಾಜು, ಕಾನೂನು ಮಾಪನ ಶಾಸ್ತ್ರ ಹಾಗೂ ಆಹಾರ ನಿಗಮ ಇಲಾಖೆ ಅಧಿಕಾರಿಗಳೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಯೋಜನೆಯಿಂದ ಯಾರೂ ಹೊರಗುಳಿಯಬಾರದು. ಮಕ್ಕಳು ಉದ್ಯೋಗದ ನಿಮಿತ್ತ ಬೇರೆ ಕಡೆ ಇದ್ದರೆ, ವಯಸ್ಕರು ಏಕಾಂಗಿಯಾಗಿದ್ದರೆ ಅಂತವರಿಗೆ ಮನೆಗೆ ಪಡಿತರ ತಲುಪಿಸಲಾಗುತ್ತಿದೆ. ಜಿಲ್ಲೆಯಲ್ಲಿ 15 ಸಾವಿರ ನಾಗರಿಕರಿದ್ದು, 10 ಸಾವಿರ ಜನರು ಮೊಬೈಲ್ ಹೊಂದದೆ ಕಾರಣಕ್ಕೆ ಯೋಜನೆಯಿಂದ ವಂಚಿತರಾಗಿದ್ದಾರೆ. 148 ಜನರು ಮೃತಪಟ್ಟಿದ್ದಾರೆ. 2,750 ಫಲಾನುಭವಿಗಳಿಗೆ ಯೋಜನೆ ಲಾಭ ದೊರೆಯುತ್ತಿದೆ. ಇನ್ನು 2,112 ಜನರ ಮನೆಗೆ ಆಹಾರ ಪದಾರ್ಥ ತಲುಪಬೇಕಿದ್ದು ಅಧಿಕಾರಿಗಳು ಮುತುವರ್ಜಿ ವಹಿಸಬೇಕು. ನ್ಯಾಯಬೆಲೆ ಅಂಗಡಿಯವರು ಮನೆ ಬಾಗಿಲಿಗೆ ಪಡಿತರ ವಿತರಣೆ ಮಾಡಬೇಕೆಂದರು.

### ಎಪಿಎಲ್‌ಗೆ ಪರಿವರ್ತನೆ ಆತುರ ಬೇಡ

ರಾಜ್ಯದಲ್ಲಿ 7ಲಕ್ಷಕ್ಕಿಂತ ಅಧಿಕ ಅನರ್ಹ ಬಿಪಿಎಲ್ ಕಾರ್ಡ್‌ಗಳಿವೆಯೆಂದು ಕೇಂದ್ರ ಸರ್ಕಾರ ಅಂದಾಜು ಮಾಡಿದ್ದು, ಎಲ್ಲಾ ಕಾರ್ಡ್‌ಗಳನ್ನು ಏಕಾಏಕಿ ಎಪಿಎಲ್‌ಗೆ ಪರಿವರ್ತಿಸಲು ಸಾಧ್ಯವಿಲ್ಲ. ಆದಾಯ ತೆರಿಗೆ ಪಾವತಿಸುತ್ತಾರೆಂಬ ಕಾರಣಕ್ಕೆ ಅಂತವರು ಬಿಪಿಎಲ್‌ಗೆ ಅನರ್ಹರಲ್ಲ ಎಂದು ತೀರ್ಮಾನಿಸುವುದು ಸರಿಯಲ್ಲ. ಕಾರ್ಡ್ ಪರಿಷ್ಕರಣೆ ವೇಳೆ ಮನೆ ಹಾಗೂ ಬೈಕ್‌ಸಾಲ ಸೇರಿ ವಿವಿಧ ಸವಲತ್ತಿಗಾಗಿ ಜನರು ಆದಾಯ ತೆರಿಗೆ ಪಾವತಿಸುತ್ತಾರೆ. ಅಂತವರನ್ನು ಶ್ರೀಮಂತರ ಪಟ್ಟಿಗೆ ಸೇರಿಸಿ ಬಿಪಿಎಲ್ ಕಾರ್ಡ್‌ನಿಂದ ವಂಚಿತರನ್ನಾಗಿಸುವುದು ಬೇಡ. ಜಿಲ್ಲೆಯಲ್ಲಿ 2,396 ಬಿಪಿಎಲ್ ಕಾರ್ಡ್‌ಗಳು ಈ ರೀತಿ ಪರಿಷ್ಕರಣೆಯಲ್ಲಿವೆ.

ಈಗಾಗಲೇ ಬಿಪಿಎಲ್‌ನಿಂದ ಎಪಿಎಲ್‌ಗೆ ಪರಿವರ್ತಿಸಿದ್ದರೆ ಅಗತ್ಯ ದಾಖಲೆಗಳನ್ನು ಪಡೆದು ಬಿಪಿಎಲ್ ಕಾರ್ಡ್ ನೀಡಲು ಮರು ಪರಿಶೀಲನೆ ನಡೆಸಬೇಕು. ಕುಟುಂಬದ ಮಕ್ಕಳು ಬೇರೆ ಕಡೆ ಕೆಲಸ ಮಾಡಿಕೊಂಡು ಆದಾಯ ತೆರಿಗೆ ಪಾವತಿಸುತ್ತಿದ್ದರೆ ತಂದೆ-ತಾಯಿಗೆ ಬಿಪಿಎಲ್ ಕಾರ್ಡ್ ನೀಡಬಹುದು. ಈ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸಬೇಕು.




> ಜಿಲ್ಲೆಯಲ್ಲಿ 5 ಲಕ್ಷ ಬಿಪಿಎಲ್, 1.54 ಲಕ್ಷ ಎಪಿಎಲ್ ಫಲಾನುಭವಿಗಳಿದ್ದಾರೆ. ಆಹಾರ ಇಲಾಖೆಯಿಂದ ಶೇ. 82ರಷ್ಟು ಯೋಜನೆಗಳು ಪ್ರಗತಿ ಕಂಡಿವೆ. ಅನ್ನ ಸುವಿಧಾ ಸೇರಿ ಎಲ್ಲಾ ಯೋಜನೆಗಳನ್ನು ಸಮರ್ಪಕವಾಗಿ ತಲುಪಿಸುವಂತೆ ಅಧಿಕಾರಿಗಳಿಗೆ ಹೇಳಿದ್ದೇನೆ.
>
> **- ಕೆ.ಹೆಚ್.ಮುನಿಯಪ್ಪ, ಸಚಿವ**

ಬಿಪಿಎಲ್‌ಗೆ ಅರ್ಹರಾಗಿದ್ದರೂ ಎಪಿಎಲ್‌ಗೆ ಬದಲಾಗಿದ್ದರೆ ಅಂತವರು ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿದರೆ 15 ದಿನಗಳ ಒಳಗೆ ಸಮಸ್ಯೆ ಪರಿಹಾರವಾಗಲಿದೆ ಎಂದು ಭರವಸೆ ನೀಡಿದರು.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಜಿಲ್ಲೆಗೆ 10 ಸಾವಿರ ಮೆಟ್ರಿಕ್ ಟನ್ ರಾಗಿ ಖರೀದಿ ಗುರಿ ನೀಡಲಾಗಿದೆ. ಮಾ. 31ರ ವರೆಗೆ ಮಾರಾಟ ಮಾಡಬಹುದು. ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಆಹಾರ ಇಲಾಖೆಯ ಜಂಟಿ ನಿರ್ದೇಶಕರು ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ನಿರ್ದೇಶನ ನೀಡಿದರು.

ಹೊಸ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿ/ ಪಂಗಡದ ಸಮುದಾಯದ ಸಂಘ ಸಂಸ್ಥೆಗಳಿಗೆ/ಸಮುದಾಯದ ಖಾಸಗಿ ವ್ಯಕ್ತಿಗಳಿಗೆ ಮೀಸಲಾತಿ ಅನುಸರಿಸಿ ಹೊಸ ನ್ಯಾಯಬೆಲೆ ಅಂಗಡಿ ಮಂಜೂರು ಮಾಡಲು ಆದ್ಯತೆ ನೀಡಬೇಕೆಂದು ತಿಳಿಸಿದರು.

ಸರ್ಕಾರದಿಂದ ಇಂದಿರಾ ಕಿಟ್ ನೀಡುವ ಯೋಜನೆ ಜಾರಿಗೊಳಿಸಿದ್ದು, ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಫೆಬ್ರವರಿ ಅಂತ್ಯ ಅಥವಾ ಮಾರ್ಚ್ ತಿಂಗಳಲ್ಲಿ ಕಿಟ್ ನೀಡಲಾಗುವುದು. ಕಿಟ್‌ನಲ್ಲಿ ಬೇಳೆ, ಸಕ್ಕರೆ, ಅಡುಗೆ ಎಣ್ಣೆ, ಉಪ್ಪು ನೀಡಲಾಗುವುದು. ಅದರಿಂದ ಪೌಷ್ಟಿಕ ಆಹಾರ ಸಿಗುತ್ತದೆಂದು ಅವರು ತಿಳಿಸಿದರು.

ತೂಕ ಅಳತೆಯ ಪರಿಶೀಲನೆಯನ್ನು ನಡೆಸಬೇಕು. ಗ್ರಾಹಕರಿಗೆ ಉಂಟಾಗುವ ನಷ್ಟವನ್ನು ತಡೆಯಬೇಕು, ಇಲಾಖೆಗೆ ನಿಗದಿಪಡಿಸುವ ಗುರಿಯನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಬೇಕೆಂದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ದೂದಪೀರ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕ ಅರುಣ್ ಕುಮಾರ್ ಸಂಗಾವಿ ಹಾಗೂ ಇತರರಿದ್ದರು.

### ಆದಾಯ ಮಿತಿ ಹೆಚ್ಚಿಸಲು ಶೀಘ್ರ ಕ್ರಮ

ಬಿಪಿಎಲ್ ಫಲಾನುಭವಿಯಾಗಲು 1.20 ಲಕ್ಷ ರೂಪಾಯಿ ಆದಾಯ ಪ್ರಮಾಣ ಕಡ್ಡಾಯಗೊಳಿಸಿದ್ದು, ಅದನ್ನು 1.80 ಲಕ್ಷ ರೂ.ಗೆ ಹೆಚ್ಚಿಸುವ ಬಗ್ಗೆ ಚಿಂತನೆ ನಡೆದಿದೆ ಎಂದು ಸಚಿವ ಕೆ.ಹೆಚ್. ಮುನಿಯಪ್ಪ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವು ವರ್ಷಗಳಿಂದ ಆದಾಯ ಮಿತಿ 1.20 ಲಕ್ಷ ರೂ. ಇದೆ. ಪ್ರಸ್ತುತ ದಿನಗಳ ವ್ಯಕ್ತಿಯ ವೇತನ, ಕೂಲಿ ಲೆಕ್ಕ ಹಾಕಿದರೆ ಆದಾಯ ಹೆಚ್ಚಾಗುತ್ತದೆ. ಆದ್ದರಿಂದ ಮಿತಿ ಹೆಚ್ಚಿಸುವ ಕುರಿತು ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಲಾಗುವುದೆಂದರು.

ಅನ್ನಭಾಗ್ಯ ಯೋಜನೆಯಡಿ ಕುಟುಂಬದ ಪ್ರತಿ ಸದಸ್ಯನಿಗೆ ಕೇಂದ್ರ ಸರ್ಕಾರದಿಂದ 5 ಹಾಗು ರಾಜ್ಯ ಸರ್ಕಾರದಿಂದ 5 ಸೇರಿ 10 ಕೆ.ಜಿ. ಅಕ್ಕಿ ನೀಡಲಾಗುತ್ತಿದೆ. ಅದರಲ್ಲಿ 3 ಕೆ.ಜಿ. ರಾಗಿ ಸಹ ಸೇರಿದೆ. ವರ್ಷದಲ್ಲಿ 10 ತಿಂಗಳು ರಾಗಿಯನ್ನು ಕಡ್ಡಾಯವಾಗಿ ನೀಡಲಾಗುತ್ತದೆ. ನ್ಯಾಯಬೆಲೆ ಅಂಗಡಿಗಳು ಪಾರದರ್ಶಕವಾಗಿ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ದಿಢೀರ್ ಭೇಟಿ ನೀಡಿ ಪರಿಶೀಲಿಸುವಂತೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

---

# ಬರೆದಂತೆ ಬದುಕಿದವರು ಜಿ.ಎಸ್. ಶಿವರುದ್ರಪ್ಪ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ತಾವು ರಚಿಸಿದ ಸಾಹಿತ್ಯದಂತೆ ಬದುಕನ್ನು ರೂಪಿಸಿಕೊಂಡಿದ್ದರು ಎಂದು ಉಪನ್ಯಾಸಕ ರೋಹಿತ್ ಅಗಸರಹಳ್ಳಿ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಕಾಲೇಜಿನಲ್ಲಿ ಜಿ. ಎಸ್. ಶಿವರುದ್ರಪ್ಪ ಅವರ ಶತಮಾನೋತ್ಸವ ನೆನಪಿಗಾಗಿ, ಬೆಂಗಳೂರು ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಚಕೋರ ಸಾಹಿತ್ಯ ವಿಚಾರ ವೇದಿಕೆ ಹಾಸನ ಸಂಯುಕ್ತಾಶ್ರಯದಲ್ಲಿ ನಡೆದ ಉಪನ್ಯಾಸ ಮಾಲಿಕೆ-13ರಲ್ಲಿ ಮಾತನಾಡಿ, ಶಿವರುದ್ರಪ್ಪ ಅವರಿಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಅವಕಾಶ ಸಿಗದ ಕಾರಣಕ್ಕೆ ಬೆಂಗಳೂರು ವಿವಿಗೆ ಕನ್ನಡ ಪ್ರಾಧ್ಯಾಪಕರಾಗಿ ಸೇರಿದರು ಎಂದರು.

ಸೌಂದರ್ಯ ಸಮೀಕ್ಷೆ ಅತ್ಯಂತ ಪ್ರಭಾವಿ ಕೃತಿಗಳಲ್ಲೊಂದಾಗಿದೆ. ಐಚ್ಛಿಕ ಕನ್ನಡ ಓದುವ ವಿದ್ಯಾರ್ಥಿಗಳಿಗೆ ಇದು ಉಪಯುಕ್ತವಾಗಿದೆ. ಇಚರು ಬೆಂಗಳೂರು ಯೂನಿವರ್ಸಿಟಿಗೆ ಹೋದ ಎರಡು ದಶಕಗಳ ನಂತರ ಕನ್ನಡ ಅಧ್ಯಯನಕ್ಕೆ ಹೊಸ ಆಯಾಮ ಸಿಕ್ಕಿತು. ಈಗ ನಾವು ಈಗ ನೋಡುತ್ತಿರುವ ವಿಮರ್ಶಕರು, ಚಿಂತಕರೆಲ್ಲ ಬೆಂಗಳೂರು ಯೂನಿವರ್ಸಿಟಿ ಜಿ.ಎಸ್.ಎಸ್. ಅವರ ಗರಡಿಯಲ್ಲಿ ಬೆಳೆದವರು. ಸಾಹಿತ್ಯ ರಚನೆ ಮಾಡಿದವರು ಒಮ್ಮೆ ಬರೆದದ್ದನ್ನು ಓದಿದ ನಂತರ, ತಮ್ಮ ಮನಸ್ಸಿಗೆ ಒಪ್ಪಿಗೆಯಾದರೆ ಮಾತ್ರ ಪ್ರಕಟ ಮಾಡಬೇಕು. ಇಲ್ಲದಿದ್ದರೆ ಕನ್ನಡ ಸಾಹಿತ್ಯಕ್ಕೆ ಬಲವಂತದ ಕೊಡುಗೆಯಾಗುತ್ತದೆಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯೆ ಎಚ್.ಆರ್. ಸುಜಾತ ಮಾತನಾಡಿ, ವಿದ್ಯಾರ್ಥಿಗಳು ಸಾಹಿತ್ಯ ಓದುವುದರಿಂದ ಮಾನಸಿಕ ವಿಕಸನವಾಗಿ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಕನ್ನಡ ಭಾಷೆ ಶ್ರೀಮಂತಗೊಳ್ಳುತ್ತದೆ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ ಮಾತನಾಡಿ, ಓದುವುದರಿಂದ ಸಾಹಿತ್ಯ ಶ್ರೀಮಂತಗೊಳ್ಳುವುದಲ್ಲದೆ ಪ್ರಪಂಚ ಜ್ಞಾನ ದೊರಕುತ್ತದೆ. ಇಂದಿನ ದಿನಗಳಲ್ಲಿ ವಿಶೇಷವಾಗಿ ಶೇ. 65ಕ್ಕೂ ಹೆಚ್ಚು ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವುದು ಸಂತಸ ಎಂದರು. ಪ್ರಾಂಶುಪಾಲ ಟಿ.ಪಿ. ಪುಟ್ಟರಾಜು, ಆಂಗ್ಲಭಾಷ ವಿಭಾಗದ ಮುಖ್ಯಸ್ಥ ಕೆ.ಎನ್. ರಮೇಶ್, ಇತಿಹಾಸ ವಿಭಾಗದ ಜೆ.ಜಿ.ನಟರಾಜ್ ಮತ್ತಿತರರಿದ್ದರು.

---

# ಎತ್ತಿನಹೊಳೆ ಅನುದಾನ ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಭೌಗೋಳಿಕವಾಗಿ ವಿಶಾಲವಾಗಿರುವ ಸಕಲೇಶಪುರ ಕ್ಷೇತ್ರಕ್ಕೆ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಲು ಸರ್ಕಾರ ಅಧಿಕ ಅನುದಾನ ಬಿಡುಗಡೆ ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಒತ್ತಾಯಿಸಿದರು.

ತಾಲೂಕಿನ ವಿವಿಧೆಡೆ ಶುಕ್ರವಾರ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಬಯಲು ಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಮಹತ್ವಾಕಾಂಕ್ಷಿ ಯೋಜನೆಯಾದ ಎತ್ತಿನಹೊಳೆ ಯೋಜನೆ ರಾಜ್ಯದ ಅತಿದೊಡ್ಡ ನಿರಾವರಿ ಯೋಜನೆಗಳಲ್ಲಿ ಒಂದಾಗಿದೆ. 2015ರಲ್ಲಿ ಆರಂಭವಾದ ಈ ಯೋಜನೆಯಿಂದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ ಹಾಗೂ ಚಿಕ್ಕಮಗಳೂರು ಸೇರಿ 7 ಜಿಲ್ಲೆಗಳ 29 ಬರಪೀಡಿತ ತಾಲೂಕುಗಳ 38 ಪಟ್ಟಣ ಮತ್ತು 6657 ಗ್ರಾಮಗಳ ಸುಮಾರು 75.59 ಲಕ್ಷ ಜನರು ಹಾಗು ಜಾನುವಾರುಗಳಿಗೆ 14.056 ಟಿಎಂಸಿ ಕುಡಿಯುವ ನೀರು ಪೂರೈಕೆಯಾಗಲಿದೆ. ಜೊತೆಗೆ 5 ಜಿಲ್ಲೆಗಳ 527 ಕೆರೆಗಳಿಗೆ 9.953 ಟಿಎಂಸಿ ನೀರು ತುಂಬಿಸುವ ಯೋಜನೆಯೂ ಇದಾಗಿದೆ ಎಂದು ವಿವರಿಸಿದರು.

ಯೋಜನೆ ಜಾರಿಗೆ ಮಲೆನಾಡಿನ ರೈತರು ತಮ್ಮ ಮನೆ-ಜಮೀನುಗಳನ್ನು ಕಳೆದುಕೊಂಡರೂ ಅಡ್ಡಿಪಡಿಸದೆ ಹೃದಯ ಶ್ರೀಮಂತಿಕೆಯಿಂದ ಸಹಕರಿಸಿದ್ದಾರೆ. ಅವರ ಸಹಕಾರವೇ ಯೋಜನೆ ಗುರಿಯತ್ತ ಸಾಗಲು ಕಾರಣವಾಗಿದೆ ಎಂದು ಹೇಳಿದರು.



ಆದರೆ, ಯೋಜನೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಗೆ ನೀಡಿರುವ ಅನುದಾನ ಸಮರ್ಪಕವಾಗಿಲ್ಲ. ಪ್ರಸಕ್ತ ಹಣಕಾಸು ವರ್ಷದಲ್ಲಿ ಯೋಜನೆಯಡಿ 72 ಕೋಟಿ ರೂ. ಮಾತ್ರ ಬಿಡುಗಡೆಯಾಗಿದೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಇದು ಸಾಕಾಗದು. ಯೋಜನೆಯ ಮೊದಲ ಹಂತದ ಉದ್ಘಾಟನೆ ಸಂದರ್ಭದಲ್ಲಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗೆ 1000 ಕೋಟಿ ರೂ. ಅನುದಾನ ನೀಡುವಂತೆ ಮನವಿ ಮಾಡಿದ್ದೆ. ಆದರೆ ಈಗಿನ ಅನುದಾನ ಆನೆ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆಯಂತಾಗಿದೆ ಎಂದು ಟೀಕಿಸಿದರು.

ಇದುವರೆಗೆ ವಿವಿಧ ಸರ್ಕಾರಗಳ ಅವಧಿಯಲ್ಲಿ ಕ್ಷೇತ್ರಕ್ಕೆ 300 ಕೋಟಿ ರೂ. ಅನುದಾನ ಲಭಿಸಿದೆ. ತಾವು ಶಾಸಕನಾದಬಳಿಕ ಕಳೆದ ಎರಡೂವರೆ ವರ್ಷಗಳಲ್ಲಿ ನೀಡಿರುವ ಅನುದಾನ ಹಂಚಿಕೆಯನ್ನು ಸಮಗ್ರವಾಗಿ ಪರಿಶೀಲಿಸಿ, ಅಗತ್ಯಕ್ಕೆ ತಕ್ಕಂತೆ ಹೆಚ್ಚುವರಿ ಅನುದಾನ ಒದಗಿಸಬೇಕು ಎಂದು ಆಗ್ರಹಿಸಿದರು.

ಲಭ್ಯವಿರುವ ಅನುದಾನದಲ್ಲಿ ತೀವ್ರ ಹದಗೆಟ್ಟಿರುವ ರಸ್ತೆಗಳಿಗೆ ಆದ್ಯತೆ ನೀಡಿ ಕಾಮಗಾರಿ ಆರಂಭಿಸಲಾಗಿದೆ. ಅನುದಾನವನ್ನು ಕಿಂಚಿತ್ತೂ ವ್ಯರ್ಥ ಮಾಡದೆ ಸದ್ಬಳಕೆ ಮಾಡುವತ್ತ ವಿಶೇಷ ಗಮನ ಹರಿಸಲಾಗಿದೆ ಎಂದರು.


### ಎಲ್ಲೆಲ್ಲಿ ಕಾಮಗಾರಿ ಆರಂಭ

ಕುರುಭತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಡುವರಹಳ್ಳಿಯಲ್ಲಿ 60 ಲಕ್ಷ ರೂ., ಶುಕ್ರವಾರಸಂತೆ ವ್ಯಾಪ್ತಿಯಲ್ಲಿ 20 ಲಕ್ಷ ರೂ., ನಡಗೆರೆ-ಉಮ್ಮತ್ತೂರು ಸಂಪರ್ಕ ರಸ್ತೆ ನಿರ್ಮಾಣಕ್ಕೆ 1.30 ಕೋಟಿ ರೂ., ಹಡ್ಲಹಳ್ಳಿ-ಲಕ್ಷ್ಮೀಪುರ ರಸ್ತೆ ನಿರ್ಮಾಣಕ್ಕೆ 1.5 ಕೋಟಿ ರೂ., ಆದರಗೆರೆ ರಸ್ತೆ ಅಭಿವೃದ್ಧಿಗೆ 20 ಲಕ್ಷ ರೂ., ಹೆನ್ನಲಿ ಮುಖ್ಯರಸ್ತೆಯಿಂದ ಗೌಡ್ರುಬಯಲು ಗ್ರಾಮಕ್ಕೆ ಸಂಪರ್ಕ ರಸ್ತೆ ನಿರ್ಮಾಣಕ್ಕೆ 20 ಲಕ್ಷ ರೂ. ಹಾಗೂ ಯಸಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆತ್ತೂರು-ಯಸಳೂರು ಮುಖ್ಯರಸ್ತೆಯಿಂದ ಹೂವಿನಹಳ್ಳಿ, ಕೋಡ್ರಳ್ಳಿ, ಕುಂಬ್ರಹಳ್ಳಿ ಗ್ರಾಮಗಳಿಗೆ ಸಂಪರ್ಕಿಸುವ 60 ಲಕ್ಷ ರೂ. ವೆಚ್ಚದ ನೂತನ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಗಿದೆ ಎಂದು ಮಾಹಿತಿ ನೀಡಿದರು.

ತಾಲೂಕು ಬಿಜೆಪಿ ಮಂಡಲ ಅಧ್ಯಕ್ಷ ವಳಲಹಳ್ಳಿ ಅಶ್ವಥ್, ನಿಕಟಪೂರ್ವ ಅಧ್ಯಕ್ಷ ಪ್ರತಾಪ್, ವಿಶ್ವೇಶ್ವರಯ್ಯ ನಿಗಮ ನಿಯಮಿತ ಅಧಿಕಾರಿಗಳು, ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

---

# ಚ.ರಾ.ಪಟ್ಟಣದಲ್ಲಿ ತಂಬಾಕು ನಿಯಂತ್ರಣಾಧಿಕಾರಿಗಳಿಂದ ದಾಳಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪಟ್ಟಣದ ವಿವಿಧ ಅಂಗಡಿಗಳ ಮೇಲೆ ಪೊಲೀಸರ ನೆರವಿನೊಂದಿಗೆ ದಿಢೀರ್ ದಾಳಿ ನಡೆಸಿದ ತಂಬಾಕು ನಿಯಂತ್ರಣ ಅಧಿಕಾರಿಗಳು 42 ಪ್ರಕರಣ ಪತ್ತೆ ಹಚ್ಚಿದ್ದಾರೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರ ನಿರ್ದೇಶನದ ಮೇರೆಗೆ ಜಂಟಿ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಕೆಎಸ್‌ಆರ್‌ಟಿಸಿ ಹೊಸ ಬಸ್ ನಿಲ್ದಾಣ, ಹಳೆ ಬಸ್ ನಿಲ್ದಾಣ, ಪುರಸಭೆ ಆವರಣದ ವಾಣಿಜ್ಯ ಸಂಕೀರ್ಣ, ಸಾರ್ವಜನಿಕ ಆಸ್ಪತ್ರೆ ಮುಂಭಾಗದ ಕೆಲವು ಅಂಗಡಿಗಳ ಮೇಲೆ ದಾಳಿ ನಡೆಸಿ 42 ಪ್ರಕರಣಗಳಿಂದ 4,200 ರೂ. ದಂಡ ವಿಧಿಸಿದ್ದಾರೆ.

ಸಾರ್ವಜನಿಕ ಸ್ಥಳಗಳಲ್ಲಿ 18 ವರ್ಷದೊಳಗಿನ ಮಕ್ಕಳು ತಂಬಾಕು ಸೇವನೆ ಮಾಡದಂತೆ ಸೂಚಿಸುವ 60★30ರ ಅಳತೆಯ ನಾಮಫಲಕ ಅಂಗಡಿಗಳಲ್ಲಿ ಪ್ರದರ್ಶನ ಮಾಡುವಂತೆ ಸೂಚಿಸಿದರು. ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡುವ ಜವಾಬ್ದಾರಿ ಪ್ರತಿಯೊಬ್ಬರ ಕರ್ತವ್ಯ. ನಿಯಮ ಮೀರಿ ಮಾರಾಟ ಮಾಡುವವರ ವಿರುದ್ಧ ಕಾನೂನು ಪ್ರಕಾರ ದಂಡ ವಿಧಿಸಲಾಗಿದೆ. ಈ ದಾಳಿ ನಿರಂತರವಾಗಿ ಮುಂದುವರೆಯತ್ತದೆ. ತಂಬಾಕು ಮಾರಾಟ ಸಂಪೂರ್ಣ ಸ್ಥಗಿತಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯ ಮಮತಾ, ಲೆಕ್ಕಪರಿಶೋಧಕ ಸುರೇಶ್, ತಾಲ್ಲೂಕು ಆರೋಗ್ಯ ಇಲಾಖೆಯ ಹಿರಿಯ ನಿರೀಕ್ಷಕ ಶಿವಲಿಂಗಯ್ಯ, ನಗರ ಠಾಣೆಯ ಎಎಸ್‌ಐ ಹೆಚ್.ಪಿ.ಜಯರಾಮ್, ಸಿಬ್ಬಂದಿ ಬಿ.ಇ.ವಾಣಿ, ಗೃಹರಕ್ಷಕ ದಳದ ವಿನೋದಮ್ಮ ಇತರರಿದ್ದರು.

---

# ‘ಮೂಲ ನಿವಾಸಿ ಮುಕ್ತ ಭಾರತ’ ಕೃತಿ ಬಿಡುಗಡೆ ನಾಳೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಮಾಜದಲ್ಲಿ ಹರಡುತ್ತಿರುವ ಸುಳ್ಳು, ಅರ್ಧ ಸತ್ಯ ಹಾಗೂ ವಿಕೃತ ಇತಿಹಾಸದ ನಡುವೆ ಸತ್ಯಾನ್ವೇಷಣೆಯ ಅಗತ್ಯತೆಯನ್ನು ಒತ್ತಿ ಹೇಳುವ ಮೂಲ ನಿವಾಸಿ ಮುಕ್ತ ಭಾರತ (ಒಂದು ವಿಕೃತ ವಿಚಾರಧಾರೆಯ ವಿಶ್ಲೇಷಣೆ) ಕೃತಿ ಫೆ. 15ರಂದು ಬಿಡುಗಡೆ ಆಗಲಿದೆ ಎಂದು ಪತ್ರಕರ್ತ ನಾಗರಾಜ್ ಹೆತ್ತೂರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಪತ್ರಕರ್ತ ಮಲ್ನಾಡ್ ಮೆಹಬೂಬ್ ಅವರು ತಳಸ್ಪರ್ಶಿ ಪುಸ್ತಕ ಬರೆದಿದ್ದು ಪ್ರತಿಯೊಬ್ಬರೂ ಓದಲೇಬೇಕಾದ ಕೃತಿ ಇದಾಗಿದೆ. ಭಾನುವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.




ಕಲಾ ಮತ್ತು ವಿಜ್ಞಾನ ಕಾಲೇಜು ಪ್ರಾಂಶುಪಾಲ ಇರ್ಷಾದ್ ಕೃತಿ ಬಿಡುಗಡೆ ಮಾಡಲಿದ್ದಾರೆ. ಆಲೂರಿನ ಕನ್ನಡ ಉಪನ್ಯಾಸಕ ರೋಹಿತ್ ಅಗಸರವಳ್ಳಿ ಕೃತಿ ಕುರಿತು ಮಾತನಾಡಲಿದ್ದಾರೆ. ಸಾಮಾಜಿಕ ಕಾರ್ಯಕರ್ತೆ ನಜ್ಮಾ ನಜೀರ್ ಚಿಕ್ಕನೆರಳೆ, ಪ್ರಕಾಶಕ ಮಹಮ್ಮದ್ ಅಜರುದ್ದೀನ್ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ವಹಿಸಲಿದ್ದಾರೆ ಎಂದರು.

ಕೃತಿಕಾರ ಮಲ್ನಾಡ್ ಮೆಹಬೂಬ್, ನಮ್ಮ ಹಾಸನ ಟಿವಿ ಮುಖ್ಯಸ್ಥ ತೌಫೀಕ್ ಅಹಮದ್ ಇದ್ದರು.

---

# ಫೆ. 16ಕ್ಕೆ ಕಾಳಿಕಾಂಬ ದೇವಸ್ಥಾನದಲ್ಲಿ ಪೂರ್ವಭಾವಿ ಸಭೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಕಲಗೂಡು ತಾಲೂಕು ಅರೇಮಾದನಹಳ್ಳಿಯ ವಿಶ್ವಕರ್ಮ ಮಠದಲ್ಲಿ ಫೆ. 25 ಹಾಗೂ 26ರಂದು ಹಮ್ಮಿಕೊಂಡಿರುವ ಸನ್ಯಾಸ ದೀಕ್ಷೆ ಮತ್ತು ಶಿಷ್ಯತ್ವ ಸ್ವೀಕಾರ ಸಮಾರಂಭದ ಅಂಗವಾಗಿ ಫೆ.16ರ ಸೋಮವಾರ ಸಂಜೆ 5 ಗಂಟೆಗೆ ನಗರದ ಕಾಳಿಕಾಂಬ ಕಮಠೇಶ್ವರ ದೇವಾಲಯದ ವಿಶ್ವಕರ್ಮ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ.

ಸಭೆಯ ದಿವ್ಯ ಸಾನಿಧ್ಯವನ್ನು ಶ್ರೀಮಠದ ಶಿವಸುಜ್ಞಾನತೀರ್ಥ ಸ್ವಾಮೀಜಿ ವಹಿಸುವರು. ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಹೆಚ್.ಬಿ.ಕುಮಾರಾಚಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಭೆಯಲ್ಲಿ ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಹೆಚ್.ವಿ.ಹರೀಶ್ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆಂದು ತಾಲ್ಲೂಕು ವಿಶ್ವಕರ್ಮ ಸಮಾಜದ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಆನಂದ್ ತಿಳಿಸಿದ್ದಾರೆ.

---

# ಚರಂಡಿ ಕಾಮಗಾರಿ ವೀಕ್ಷಣೆಗೆ ಬಂದ ಮಾಜಿ ಸಚಿವರಿಗೆ ತರಾಟೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪಟ್ಟಣದ 9ನೇ ವಾರ್ಡ್‌ನ ವೈಕುಂಠ ಬೀದಿಯಲ್ಲಿ ನಡೆಯುತ್ತಿರುವ ರಸ್ತೆ, ಚರಂಡಿ ಕಾಮಗಾರಿ ಪರಿಶೀಲನೆಗೆ ಬಂದಿದ್ದ ಮಾಜಿ ಸಚಿವ ಬಿ.ಶಿವರಾಂ ಅವರನ್ನು ಸ್ಥಳೀಯರು ಹಾಗೂ ಬಿಜೆಪಿ ಕಾರ್ಯಕರ್ತರು ತರಾಟೆಗೆ ತೆಗೆದುಕೊಂಡರು.

ಒಳ್ಳೆಯ ಕೆಲಸ ನಡೆಯುತ್ತಿರುವಾಗ ಅದಕ್ಕೆ ಕೊಕ್ಕೆ ಹಾಕಲು ನೀವು ಬಂದಿದ್ದೀರಾ. ಈ ವಾರ್ಡ್ ಅಭಿವೃದ್ಧಿ ಬಗ್ಗೆ ನೀವು ತಲೆ ಕೆಡಿಸಿಕೊಳ್ಳಬೇಡಿ. ತಾಲೂಕಿನಲ್ಲಿ ನೂರಾರು ಸಮಸ್ಯೆಗಳಿದ್ದು ಆ ಕಡೆಗೆ ಗಮನ ಕೊಡಿ ಎಂದು ಪುರಸಭೆ ಸದಸ್ಯ ಜಗದೀಶ್ ಹಾಗೂ ಇತರರು ತರಾಟೆಗೆ ತೆಗೆದುಕೊಂಡರು. ಮೊದಲು ಚನ್ನಕೇಶವ ದೇವಾಲಯ ಆವರಣದಲ್ಲಿರುವ ಅಪಾಯಕಾರಿ ರಂಗ ಮಂಟಪವನ್ನು ಸುಧಾರಿಸಲು ಗಮನ ಹರಿಸಬೇಕು. ಅಭಿವೃದ್ಧಿ ಕೆಡಿಸಲು ಯತ್ನಿಸಬೇಡಿ, ಇಲ್ಲಿಂದ ತೆರಳಿ ಎಂದರು. ದೇಗುಲದ ಆವರಣದಲ್ಲಿರುವ ರಂಗ ಮಂಟಪ ಬೀಳುವ ಸ್ಥಿತಿಯಲ್ಲಿದ್ದು ಯಾವ ಕ್ಷಣದಲ್ಲಾದರೂ ಅಪಾಯ ಸಂಭವಿಸಬಹುದು. ಭಯದ ವಾತಾವರಣದಲ್ಲಿ ಬದುಕುತ್ತಿದ್ದೇವೆ. ರಾಜ್ಯದಲ್ಲಿ ನಿಮ್ಮದೇ ಸರ್ಕಾರವಿದೆ. ಅದನ್ನು ಅಭಿವೃದ್ಧಿಪಡಿಸುವ ಕೆಲಸ ಮಾಡಿ. ಅದನ್ನು ಬಿಟ್ಟು ಅಭಿವೃದ್ಧಿಗೆ ಅಡ್ಡಗಾಲು ಹಾಕುವುದು ಬೇಡ ಎಂದರು. ಇದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.



### ಲೋಪ ಪ್ರಶ್ನಿಸಿದ್ದಕ್ಕೆ ಗಲಾಟೆ

ಮಾಜಿ ಸಚಿವ ಬಿ.ಶಿವರಾಂ ಸುದ್ದಿಗಾರರೊಂದಿಗೆ ಮಾತನಾಡಿ, ವೈಕುಂಠ ಬೀದಿಯಲ್ಲಿ ನಡೆಯುತ್ತಿರುವ ಕಾಮಗಾರಿಯಲ್ಲಿ ಗುಣಮಟ್ಟ ಕಾಪಾಡಿಕೊಂಡಿಲ್ಲ ಎಂದು ಎಂಜಿನಿಯರ್ ಹೇಳಿದ್ದರು. ಸತ್ಯ ತಿಳಿಯಲೆಂದು ಸ್ಥಳಕ್ಕೆ ಭೇಟಿ ನೀಡಿದಾಗ ಕಳಪೆ ಕಾಮಗಾರಿ ಬಯಲಾಗಿದೆ. ಸರಿಯಾಗಿ ಜೆಲ್ಲಿ ಹಾಕಿಲ್ಲ. ಚರಂಡಿ ಕಾಮಗಾರಿಯಲ್ಲೂ ಲೋಪ ಎಸಗಿದ್ದಾರೆ. ಪಾರದರ್ಶಕ ಕಾಮಗಾರಿ ಮಾಡಿದ್ದನ್ನು ತೋರಿಸುವ ಬದಲು ಕೆಲವರು ಗಲಾಟೆ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿ ಕೆಲವರು ಮಾತನಾಡಲು ಬಿಡುತ್ತಿಲ್ಲ. ಕೆಂಪೇಗೌಡ ವೃತ್ತ, ಕಾಂಗ್ರೆಸ್ ಕಚೇರಿ ಮುಂಭಾಗದ ಕಾಮಗಾರಿ ಏಕೆ ಪ್ರಶ್ನಿಸುತ್ತಿಲ್ಲ ಎನ್ನುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಅಲ್ಲಿಯ ಕಾಮಗಾರಿಯನ್ನೂ ಪ್ರಶ್ನಿಸುತ್ತೇನೆ ಎಂದರು.

# ಚನ್ನರಾಯಪಟ್ಟಣಕ್ಕೆ ಎಂಸಿಎಚ್ ಘೋಷಣೆಗೆ ಶಾಸಕರ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಬೆಂಗಳೂರು ವಿಧಾನ ಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶಾಸಕ ಸಿ.ಎನ್.ಬಾಲಕೃಷ್ಣ ಭೇಟಿಯಾಗಿ ಚನ್ನರಾಯಪಟ್ಟಣ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಎಂಸಿಎಚ್ ಘೋಷಣೆ ಮಾಡಬೇಕೆಂದು ಮನವಿ ಸಲ್ಲಿಸಿದ್ದು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.



ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಎಂಸಿಹೆಚ್ ಮಂಜೂರಾತಿ ನೀಡಿ ಆಯವ್ಯಯದಲ್ಲಿ ಘೋಷಣೆ ಮಾಡಬೇಕು ಎಂದು ಮನವಿ ಮಾಡಿದರು. ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಚನ್ನರಾಯಪಟ್ಟಣದ ಸಾರ್ವಜನಿಕ ಆಸ್ಪತ್ರೆಯು ತಾಲೂಕಿನಾದ್ಯಂತ 1.30 ಲಕ್ಷ ಜನಸಂಖ್ಯೆಗೆ ವೈದ್ಯಕೀಯ ಸೇವೆಗಳನ್ನು ಒದಗಿಸುತ್ತಿದ್ದು ಈ ಆಸ್ಪತ್ರೆಗೆ ಗಡಿ ಭಾಗದ ಮಂಡ್ಯ, ತುಮಕೂರು ಹಾಗೂ ಸುತ್ತಮುತ್ತಲಿನ ಸಾರ್ವಜನಿಕರು ಸಹ ಆಗಮಿಸುತ್ತಿರುವುದು ವಿಶೇಷ ಎಂದು ತಿಳಿಸಿದರು.

ಇಲ್ಲಿ ಪ್ರತಿನಿತ್ಯ 1000 ದಿಂದ 1,200ರ ವರೆಗೆ ಹೊರ ರೋಗಿಗಳು ಹಾಗೂ 70 ರಿಂದ 80 ಒಳರೋಗಿಗಳು ಚಿಕಿತ್ಸೆ ಪಡೆಯುತ್ತಿರುತ್ತಾರೆ. ಈ ಆಸ್ಪತ್ರೆಯಲ್ಲಿ ತಿಂಗಳಿಗೆ ಸರಾಸರಿ 80 ರಿಂದ 90 ಸಾಮಾನ್ಯ ಪ್ರಸೂತಿ ಹಾಗೂ 20 ರಿಂದ 30 ಶಸ್ತ್ರ ಚಿಕಿತ್ಸೆ ಮೂಲಕ ಪ್ರಸೂತಿಗಳನ್ನು ನಡೆಸಲಾಗುತ್ತಿರುತ್ತದೆ ಎಂದು ಮಾಹಿತಿ ನೀಡಿದರು.

ತಾಲೂಕು ಕೇಂದ್ರ, ಚನ್ನರಾಯಪಟ್ಟಣವು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದ್ದು 2,93,723 ಜನಸಂಖ್ಯೆ ಹೊಂದಿರುತ್ತದೆ. 93 ಉಪ ಕೇಂದ್ರ, 25 ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ 4 ಸಮುದಾಯ ಆರೋಗ್ಯ ಕೇಂದ್ರಗಳಿಗೆ ಒಂದು ತಾಲೂಕು ಸಾರ್ವಜನಿಕ ಆಸ್ಪತ್ರೆ ಕಾರ್ಯ ನಿರ್ವಹಿಸುತ್ತದೆ ಎಂದರು.

ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಂದ ಪ್ರಸೂತಿಗಾಗಿ ಈ ಆಸ್ಪತ್ರೆಗೆ ಕಳುಹಿಸಿ ಕೊಡಲಾಗುತ್ತದೆ. ಆದರೆ ಎಂಸಿಹೆಚ್ ಆಸ್ಪತ್ರೆ ಇಲ್ಲದೇ ಇರುವುದರಿಂದ ಜತೆಗೆ ಒಬ್ಬರೇ ಪ್ರಸೂತಿ ತಜ್ಞರು ಇರುವುದರಿಂದ ಕೆಲಸದ ಒತ್ತಡದಿಂದಾಗಿ ಮತ್ತು ಸ್ಥಳಾವಕಾಶದ ಕೊರತೆಯಿಂದಾಗಿ ಬಹುತೇಕ ಪ್ರಸೂತಿ ಫಲಾನುಭವಿಗಳನ್ನು ಜಿಲ್ಲಾ ಆಸ್ಪತ್ರೆಗೆ ಸ್ಥಳಾಂತರಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಾಲ್ಲೂಕಿನ ಎಲ್ಲಾ ಗರ್ಭಿಣಿಯರಿಗೆ ಸೇವೆ ಒದಗಿಸಲು ಅನುಕೂಲವಾಗುವಂತೆ ಸಾರ್ವಜನಿಕ ಹಿತದೃಷ್ಟಿಯಿಂದ ಚನ್ನರಾಯಪಟ್ಟಣ ತಾಲೂಕು ಆಸ್ಪತ್ರೆಗೆ ಎಂಸಿಹೆಚ್ ಆಸ್ಪತ್ರೆಯನ್ನು ಮಂಜೂರು ಮಾಡಿ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಬೇಕೆಂದು ತಮ್ಮಲ್ಲಿ ಕೋರುತ್ತೇನೆ ಎಂದು ಮುಖ್ಯಮಂತ್ರಿ ಮನವಿ ಮಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನಿಮ್ಮ ಬೇಡಿಕೆ ಸಾರ್ವಜನಿಕರ ಪರವಾಗಿದ್ದು ಒಳ್ಳೆಯ ಅಭಿಪ್ರಾಯವಾಗಿದೆ. ಈ ಸಾಲಿನ ಬಜೆಟ್‌ನಲ್ಲಿ ಒದಗಿಸಲು ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.

ಏನಯ್ಯ ಬಾಲಕೃಷ್ಣ, ಎಲ್ಲಿ ಸಿಕ್ಕಿದರು ಸಹ ತನ್ನ ತಾಲೂಕಿಗೆ ಅಗತ್ಯವಿರುವ ಸೌಲಭ್ಯಗಳ ಪಟ್ಟಿ ಸಿದ್ಧಪಡಿಸಿಕೊಂಡು ಮನವಿ ಮಾಡಲು ಮೊದಲೇ ರೆಡಿಯಾಗಿದ್ದೀಯಾ. ಒಳ್ಳೆ ಕೆಲಸಗಾರ ಕಣ್ಣಯ್ಯ ನೀನು ಎಂದು ಸಿಎಂ ನಗೆ ಚಟಾಕಿ ಹಾರಿಸಿದರು.

ನಾನು ಸಲ್ಲಿಸಿರುವ ಮನವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಕಾರಾತ್ಮಕವಾಗಿ ಸ್ಪಂದಿಸಿರುತ್ತಾರೆ ಎಂದು ಶಾಸಕರು ತಿಳಿಸಿದ್ದಾರೆ.

# ಹಿಮ್ಸ್ ವೈದ್ಯರ ವಿರುದ್ಧ ನಿರ್ಲಕ್ಷ್ಯದ ಆರೋಪ

ಹಾಸನ: ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆಯನ್ನು ಸರಿಯಾಗಿ ಮಾಡದೆ ಹಿಮ್ಸ್ ವೈದ್ಯರು ನನ್ನ ಮಗಳ ಜೀವದೊಂದಿಗೆ ಚೆಲ್ಲಾಟವಾಡಿದ್ದಾರೆ ಎಂದು ಅರಕಲಗೂಡು ತಾಲ್ಲೂಕು ವಿಜಾಪುರ ಫಾರೆಸ್ಟ್ ಗ್ರಾಮದ ಪೂರ್ಣಿಮಾ ಕಣ್ಣೀರು ಹಾಕಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 16 ವರ್ಷದ ಇಂದುಶ್ರೀಗೆ 2025ರ ಡಿ. 30 ರಂದು ಅಪೆಂಡಿಕ್ಸ್ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಮಾರನೇ ದಿನದಿಂದಲೇ ವಿಪರೀತ ಕೀವು ಬಂದಿದ್ದರಿಂದ ವೈದ್ಯರನ್ನು ಕೇಳಿದಾಗ ಏನೂ ಆಗುವುದಿಲ್ಲ ಧೈರ್ಯವಾಗಿರಿ ಎಂದು ನಮ್ಮನ್ನು ಸುಮ್ಮನಿರಿಸಿದರು. ವೈದ್ಯರಾದ ಡಾ. ಜಿ.ಡಿ.ಈಶ್ವರ್ ಪ್ರಸಾದ್ ಅವರ ತಂಡ ನಿರ್ಲಕ್ಷ್ಯದಿಂದ ಶಸ್ತ್ರ ಚಿಕಿತ್ಸೆ ಮಾಡಿದ್ದೇ ಅವಾಂತರಕ್ಕೆ ಕಾರಣ. ಆರೋಗ್ಯದಲ್ಲಿ ಏರುಪೇರು ಉಂಟಾದ ಹಿನ್ನೆಲೆಯಲ್ಲಿ ಜ. 5ರ ವರೆಗೆ ಒಳ ರೋಗಿಯಾಗಿ ದಾಖಲಿಸಿಕೊಂಡಿದ್ದರು. ನಂತರ ಅರಕಲಗೂಡು ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಶಸ್ತ್ರ ಚಿಕಿತ್ಸೆಯಾದ ಜಾಗದಲ್ಲಿ ಕೀವು ಚಿಮ್ಮುತ್ತಿದ್ದಂತೆ ಗಾಬರಿಯಾದ ನಾವು ಮೈಸೂರಿನ ಜೆಎಸ್ಎಸ್ ಆಸ್ಪತ್ರೆಗೆ ದಾಖಲಿಸಬೇಕಾಯಿತು. ಅಲ್ಲಿನ ವೈದ್ಯರು ಶಸ್ತ್ರ ಚಿಕಿತ್ಸೆಯಲ್ಲಿನ ಎಡವಟ್ಟು ಸಮಸ್ಯೆಗೆ ಕಾರಣ ಎಂದರು.

ಮೈಸೂರು ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ನೀಡಿದ್ದರಿಂದ ಮಗಳು ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ಆದರೆ, ಹಿಮ್ಸ್ ವೈದ್ಯರು ತೋರಿದ ನಿರ್ಲಕ್ಷ್ಯಕ್ಕೆ ಮಗಳು ಸಾವು ಬದುಕಿನ ನಡುವೆ ಹಲವು ದಿನಗಳ ವರೆಗೆ ಹೋರಾಡಬೇಕಾಯಿತು. ಆರ್ಥಿಕವಾಗಿಯೂ ತೊಂದರೆ ಅನುಭವಿಸಬೇಕಾಯಿತು. ನಿರ್ಲಕ್ಷ್ಯ ವಹಿಸಿದ ವೈದ್ಯರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು. ದಲಿತರ ಹೋರಾಟಗಾರರ ಒಕ್ಕೂಟದ ಜಿಲ್ಲಾಧ್ಯಕ್ಷ ದಿನೇಶ್ ಮಾತನಾಡಿ, ಹಿಮ್ಸ್‌ನಲ್ಲಿ ವ್ಯವಸ್ಥೆ ಸಂಪೂರ್ಣ ಹಾಳಾಗಿದ್ದು ಬಡರೋಗಿಗಳಿಗೆ ಉತ್ತಮ ಚಿಕಿತ್ಸೆ ದೊರೆಯುತ್ತಿಲ್ಲ. ಬಹುತೇಕ ಸರ್ಕಾರಿ ವೈದ್ಯರು ಖಾಸಗಿ ನರ್ಸಿಂಗ್ ಹೋಂಗಳನ್ನು ನಡೆಸುತ್ತಿದ್ದು ಹಿಮ್ಸ್‌ನಲ್ಲಿ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಬಿಪಿಎಲ್ ಕಾರ್ಡ್‌ದಾರರಿಂದಲೂ ಶೇ. 50 ರಷ್ಟು ಚಿಕಿತ್ಸಾ ವೆಚ್ಚ ಕಟ್ಟಿಸಿಕೊಳ್ಳುತ್ತಾರೆ. ಹೀಗಾದರೆ ಬಡವರು ಹಿಮ್ಸ್‌ಗೆ ಏಕೆ ಬರಬೇಕು. ಜಿಲ್ಲಾಡಳಿತ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಇಂದುಶ್ರೀ ಜೀವದೊಂದಿಗೆ ಚೆಲ್ಲಾಟವಾಡಿರುವ ವೈದ್ಯರ ವಿರುದ್ಧ ಕ್ರಮ ಜರುಗಿಸಬೇಕು. ಇಲ್ಲವಾದರೆ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಇಂದುಶ್ರೀ ಅವರ ತಂದೆ ಮಂಜಯ್ಯ, ಚಂದ್ರಣ್ಣ, ಜಗದೀಶ್, ದೇವರಾಜು ಹಾಜರಿದ್ದರು.

# ಕಾಫಿ ಬೆಳೆಗಾರರ ನೆರವಿಗೆ ನಿಂತ ವಿತ್ತ ಸಚಿವೆ ನಿರ್ಮಲಾ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನವದೆಹಲಿ: ಕಾಫಿ ತೋಟಗಳ ಆನ್‌ಲೈನ್ ಹರಾಜು ಪ್ರಕ್ರಿಯೆಯನ್ನು ತಕ್ಷಣವೇ ಸ್ಥಗಿತಗೊಳಿಸುವಂತೆ ಬ್ಯಾಂಕ್‌ಗಳಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆದೇಶಿಸಿದ್ದಾರೆ.



ಈ ಮೂಲಕ SARFAESI ಕಾಯ್ದೆ ಅಡಿಯಲ್ಲಿ ONLINE ಹರಾಜಿನ ತೂಗುಗತ್ತಿಯಿಂದ ಕಾಫಿ ಬೆಳೆಗಾರರು ಪಾರಾಗಿದ್ದಾರೆ.

ರಾಜ್ಯಸಭೆ ಸದಸ್ಯ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ, ಡಾ. ಸಿ.ಎನ್. ಮಂಜುನಾಥ್, ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಮಲ್ಲೇಶಬಾಬು ಅವರ ನೇತೃತ್ವದಲ್ಲಿ ಕರ್ನಾಟಕ ಕಾಫಿ ಬೆಳೆಗಾರರ ಒಕ್ಕೂಟದಿಂದ ವಿತ್ತ ಸಚಿವೆಯನ್ನು ಭೇಟಿಯಾಗಿ SARFAESI ಕಾಯ್ದೆಯ ದುಷ್ಪರಿಣಾಮಗಳ ಕುರಿತು ವಿವರಿಸಲಾಯಿತು.

ಶೇ. 95ಕ್ಕೂ ಹೆಚ್ಚು ಸಣ್ಣ-ಅತಿ ಸಣ್ಣ ಬೆಳೆಗಾರರನ್ನು ಹೊಂದಿರುವ ಕಾಫಿ ಕೃಷಿ ಕ್ಷೇತ್ರದ ಸಾಲಗಾರರಿಗೆ ಮಾರಕವಾಗಿ ಪರಿಣಮಿಸಿರುವ ಸರ್ಫೇಸಿ ಕಾಯ್ದೆ, ಕೆಲವು ಬ್ಯಾಂಕ್ ಹಾಗೂ ಮಧ್ಯವರ್ತಿಗಳು ಈ ಕಾಯ್ದೆಯ ದುರುಪಯೋಗ ಮಾಡುತ್ತಿರುವ ಕುರಿತು ಸಚಿವರ ಗಮನಕ್ಕೆ ತರಲಾಯಿತು.

ಈ ವೇಳೆ ಮಾತನಾಡಿದ ನಿರ್ಮಲಾ ಸೀತಾರಾಮನ್, ಕಾಫಿ ಕೃಷಿ ಸಾಲದ ವಸೂಲಾತಿಗೆ ಸರ್ಫೇಸಿ ಕಾಯ್ದೆ ಬಳಕೆ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದರು. ಈ ಕೂಡಲೇ ಜಾರಿಗೆ ಬರುವಂತೆ ಕಾಯ್ದೆ ಅಡಿಯಲ್ಲಿ ಆನ್ ಲೈನ್ ಹರಾಜು ಸ್ಥಗಿತಗೊಳಿಸುವಂತೆ ಬ್ಯಾಂಕ್‌ಗಳಿಗೆ ಸೂಚಿಸಲು ಅಧಿಕಾರಿಗಳಿಗೆ ಆದೇಶಿಸಿದರು.

ಫೆ. ತಿಂಗಳ 9, 10 ಹಾಗೂ 11ರಂದು ಕೆಜಿಎಫ್ ಅಧ್ಯಕ್ಷ ಹಳಸೆ ಶಿವಣ್ಣ ಅವರ ನೇತೃತ್ವದ ನಿಯೋಗ ನವದೆಹಲಿಯಲ್ಲಿ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ಭೂಪೇಂದ್ರ ಯಾದವ್, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ, ಡಾ. ಸಿ.ಎನ್ ಮಂಜುನಾಥ್ ಹಾಗೂ ಹಲವು ಸಚಿವಾಲಯದ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿ ಬೆಳೆಗಾರರ ಸಮಸ್ಯೆಗಳ ಕುರಿತು ಗಮನ ಸೆಳೆದಿದ್ದಾರೆ.

ನಿಯೋಗದಲ್ಲಿ ಕೆಜಿಎಫ್ ಉಪಾಧ್ಯಕ್ಷ ಕೆ.ಕೆ.ವಿಶ್ವನಾಥ್, ಚಿಕ್ಕಮಗಳೂರು ಜಿಲ್ಲಾ ಅಧ್ಯಕ್ಷ ಕೆ.ಯು. ರತೀಶ್, ಹೆಚ್‌ಡಿಪಿಎ ಖಜಾಂಚಿ ಎಂ.ಜೆ.ಸಚಿನ್, ಮೂಡಿಗೆರೆ ತಾಲ್ಲೂಕು ಗೌರವ ಕಾರ್ಯದರ್ಶಿ ಕೆ.ಡಿ.ಮನೋಹರ್ ಇದ್ದರು.

# ಬೆಂಬಲ ಬೆಲೆಯಡಿ ರಾಗಿ-ಭತ್ತ ಖರೀದಿ ಆರಂಭ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಗಿ ಪ್ರತಿ ಕ್ವಿಂಟಾಲ್‌ಗೆ 4,886ರೂ. ಹಾಗೂ ಭತ್ತಕ್ಕೆ 2,389ರೂ. ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ಹಾಸನ ತಾಲ್ಲೂಕಿನಲ್ಲಿ ಈಗಾಗಲೇ 1,225 ರೈತರು ನೋಂದಣಿ ಮಾಡಿಕೊಂಡಿದ್ದು, 32,661 ಕ್ವಿಂಟಾಲ್ ರಾಗಿ ಖರೀದಿಸಲು ಗುರಿ ಹೊಂದಲಾಗಿದೆ ಎಂದು ಶಾಸಕ ಹೆಚ್.ಪಿ.ಸ್ವರೂಪರ್ ತಿಳಿಸಿದರು.



ನಗರದ ಎಪಿಎಂಸಿಯಲ್ಲಿ ಪ್ರಾರಂಭವಾಗಿರುವ ರಾಗಿ ಮತ್ತು ಭತ್ತ ಖರೀದಿ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯ ಸರ್ಕಾರ ರಾಗಿ ಮತ್ತು ಭತ್ತಕ್ಕೆ ಕನಿಷ್ಟ ಬೆಂಬಲ ಬೆಲೆ ನಿಗದಿಪಡಿಸಿ ರೈತರಿಂದ ನೇರ ಖರೀದಿ ಮಾಡುವ ಉತ್ತಮ ಕಾರ್ಯಕ್ರಮ ಜಾರಿಗೊಳಿಸಿದ್ದು, ಈ ಯೋಜನೆಯಿಂದ ರೈತರಿಗೆ ಹೆಚ್ಚಿನ ಅನುಕೂಲವಾಗಲಿದ್ದು, ಅದರ ಕುರಿತು ಹೆಚ್ಚಿನ ಮಾಹಿತಿ ಗ್ರಾಮ ಮಟ್ಟದಲ್ಲಿ ತಲುಪಿಸುವ ಅಗತ್ಯವಿದೆ ಎಂದು ಹೇಳಿದರು.

ಆಹಾರ ಇಲಾಖೆ ಈ ಧಾನ್ಯ ಖರೀದಿ ಮಾಡಿ ಸರ್ಕಾರದ ಅನ್ನಭಾಗ್ಯ ಯೋಜನೆ ಮೂಲಕ ಸಾರ್ವಜನಿಕರಿಗೆ ವಿತರಣೆ ಮಾಡಲಿದೆ.

ರಾಗಿ ಗುಣಮಟ್ಟ ಅತ್ಯವಶ್ಯಕವಾಗಿರುವುದರಿಂದ ರೈತರು ಸ್ವಚ್ಛಗೊಳಿಸಿದ ಧಾನ್ಯವನ್ನು ಮಾತ್ರ ಖರೀದಿ ಕೇಂದ್ರಗಳಿಗೆ ತರಬೇಕು. ಒಂದು ಎಕರೆಗೆ 10 ಕ್ವಿಂಟಾಲ್ ಹಾಗೂ ಗರಿಷ್ಠ 5 ಎಕರೆಗೆ 50 ಕ್ವಿಂಟಾಲ್ ವರೆಗೆ ರಾಗಿ ಮಾರಬಹುದು. ರಾಗಿ ಖರೀದಿಗೆ ಮಾರ್ಚ್ 31 ಕೊನೆಯ ದಿನಾಂಕವಾಗಿದ್ದು, ಅದಕ್ಕೂ ಮುನ್ನ ರೈತರು ಧಾನ್ಯ ಒಪ್ಪಿಸುವಂತೆ ಮನವಿ ಮಾಡಿದರು.

ರೈತರು ತಮ್ಮ ಎಫ್‌ಐಡಿ ಸಂಖ್ಯೆ ಹಾಗೂ ಆಧಾರ್ ಕಾರ್ಡ್ ನಕಲಿನೊಂದಿಗೆ ಸಂಬಂಧಪಟ್ಟ ನೋಂದಣಿ, ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಬಯೋಮೆಟ್ರಿಕ್ ಮೂಲಕ ಎನ್.ಐ.ಸಿ.-ಎಫ್.ಸಿ.ಎಸ್. ತಂತ್ರಾಂಶದಲ್ಲಿ ನೋಂದಣಿ ಮಾಡಿಸಬೇಕು. ನೋಂದಾಯಿತ ರೈತರಿಂದ ಮಾತ್ರ ರಾಗಿ, ಭತ್ತ ಹಾಗೂ ಕಿರು ಸಿರಿಧಾನ್ಯಗಳನ್ನು ಖರೀದಿಸಲಾಗುತ್ತದೆ ಎಂದರು.

ನೋಂದಣಿ ಬಳಿಕ ಕಂಪ್ಯೂಟರ್ ರಶೀದಿ ಪಡೆಯುವುದು ಕಡ್ಡಾಯ. ಧಾನ್ಯ ಮಾರಾಟ ಮಾಡಿದ ತಕ್ಷಣ ಕಂಪ್ಯೂಟರ್ ಬಿಲ್ ಪಡೆಯಬೇಕು ಎಂದು ಸೂಚಿಸಲಾಗಿದೆ. ಯಾವುದೇ ಮಧ್ಯವರ್ತಿಗಳ ಮೂಲಕ ಧಾನ್ಯ ಮಾರಾಟ ಮಾಡಬಾರದು ಹಾಗೂ ತಮ್ಮ ದಾಖಲೆಗಳನ್ನು ಇತರರಿಗೆ ನೀಡಬಾರದು ಎಂದು ಎಚ್ಚರಿಕೆ ನೀಡಲಾಗಿದೆ. ಹಣವನ್ನು ರೈತರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ ಮೂಲಕ ಜಮಾ ಮಾಡಲಾಗುತ್ತದೆ. ಕಳಪೆ ಗುಣಮಟ್ಟದ ಧಾನ್ಯಗಳನ್ನು ಸ್ವೀಕರಿಸಲಾಗುವುದಿಲ್ಲ. ಸಾರ್ವಜನಿಕ ವಿತರಣೆ ವ್ಯವಸ್ಥೆಗೆ ಉತ್ತಮ ಗುಣಮಟ್ಟದ ಧಾನ್ಯ ಒದಗಿಸುವಂತೆ ರೈತರಿಗೆ ಮನವಿ ಮಾಡಿದರು. ವಿವಿಧ ಇಲಾಖೆ ಅಧಿಕಾರಿಗಳು ಹಾಗು ಎಪಿಎಂಸಿ ಮಾರುಕಟ್ಟೆಯ ಮಧು, ದೇವರಾಜು, ರಾಗಿ ಸಾಮಣ್ಣ, ಆನಂದ್ ಇದ್ದರು.

## ಎಲ್ಲರಿಗೂ ಸೇರಿದ ಪ್ರೀತಿಯ ದಿನ!

ವಾಲೆಂಟೈನ್ಸ್ ಡೇ ಪ್ರತಿ ವರ್ಷ ಫೆಬ್ರವರಿ 14ರಂದು ಆಚರಿಸಲಾಗುವ ಪ್ರೀತಿ, ಕಾಳಜಿ ಮತ್ತು ಮಾನವೀಯತೆಯ ಹಬ್ಬವಾಗಿದ್ದು, ಇದರ ಇತಿಹಾಸ ಕ್ರೈಸ್ತ ಸಂತನಾದ ಸಂತ ವಾಲೆಂಟೈನ್ಸ್ವ ಅವರ ಸ್ಮರಣೆಗೆ ಸಂಬಂಧಿಸಿದೆ. ಆದರೆ ಈ ದಿನವನ್ನು ಕೇವಲ ಹುಡುಗ-ಹುಡುಗಿಯರ ಪ್ರೀತಿಗೆ ಮಾತ್ರ ಸೀಮಿತಗೊಳಿಸದೇ, ಎಲ್ಲರಿಗೂ ಸೇರಿದ ಪ್ರೀತಿಯ ಹಬ್ಬವಾಗಿ ನೋಡಬೇಕು. ಸ್ನೇಹಿತರೊಂದಿಗೆ ಹಂಚಿಕೊಳ್ಳುವ ನಗು, ತಾಯಿ-ತಂದೆಯರ ಮೇಲಿನ ಕೃತಜ್ಞತೆ, ಸಹೋದರ-ಸಹೋದರಿಯರ ಮಮತೆ, ಪತ್ನಿ ಹಾಗೂ ಸಂಬಂಧಿಕರೊಂದಿಗೆ ಇರುವ ಬಾಂಧವ್ಯ, ಶಿಕ್ಷಕರಿಗೆ ಇರುವ ಗೌರವ ಇವೆಲ್ಲವೂ ಪ್ರೀತಿಯ ವಿಭಿನ್ನ ರೂಪಗಳು. ಸಮಾಜ, ಸಮುದಾಯ ಮತ್ತು ದೇಶದ ಮೇಲಿನ ಹೊಣೆಗಾರಿಕೆ, ಪ್ರಕೃತಿ, ಪ್ರಾಣಿಗಳು, ವಿದ್ಯಾರ್ಥಿಯಗೆ ಶಿಕ್ಷಣ ಮೇಲೆ ಪ್ರೀತಿ, ವ್ಯವಸಾಯ ಮಾಡುವವನಿಗೆ ವ್ಯವಸಾಯ ಮೇಲೆ ಪ್ರೀತಿ, ದೇಶ ಕಾಯುವ ಯೋಧರಿಗೆ ದೇಶದ ಮೇಲೆ ಪ್ರೀತಿ, ಸಾಹಿತ್ಯ ರಚನೆ ಮಾಡುವವನಿಗೆ ಸಾಹಿತ್ಯ ಮೇಲೆ, ಕ್ರಿಕೆಟ್ ಆಟಗಾರನಿಗೆ ಕ್ರಿಕೆಟ್ ಮೇಲೆ ಹಾಗೂ ಪಕ್ಷಿಗಳ ಮೇಲಿನ ಕಾಳಜಿ ಕೂಡ ನಿಜವಾದ ಪ್ರೀತಿಯೇ. ನಮ್ಮ ವೃತ್ತಿ, ಅಧ್ಯಯನ, ಕನಸುಗಳು ಮತ್ತು ಗುರಿಗಳ ಮೇಲೆ ಇರುವ ಆಸಕ್ತಿ ನಮ್ಮ ಬೆಳವಣಿಗೆಗೆ ದಾರಿಯಾಗುತ್ತದೆ. ಜೊತೆಗೆ ನಮ್ಮನ್ನೇ ಗೌರವಿಸಿ ಪ್ರೀತಿಸುವುದು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಒಂದು ನಗು, ಒಂದು ಧನ್ಯವಾದ, ಒಂದು ಸಹಾಯದ ಕೈ ಇವುಗಳೇ ಪ್ರೀತಿಯ ದೊಡ್ಡ ಅಭಿವ್ಯಕ್ತಿಗಳು. ವಾಲೆಂಟೈನ್ ಡೇ ನಮಗೆ ಕರುಣೆ, ಸಹಾನುಭೂತಿ ಮತ್ತು ಒಗ್ಗಟ್ಟಿನ ಸಂದೇಶವನ್ನು ನೆನಪಿಸಿ, ಕುಟುಂಬದಿಂದ ರಾಷ್ಟ್ರದವರೆಗೂ ಹಾಗೂ ಪ್ರಕೃತಿಯಿಂದ ನಮ್ಮ ಹೃದಯದವರೆಗೂ ಪ್ರೀತಿಯನ್ನು ಹರಡುವ ಸುಂದರ ಅವಕಾಶ ನೀಡುತ್ತದೆ. ಹೀಗಾಗಿ ಈ ದಿನ ಎಲ್ಲ ಸಂಬಂಧಗಳನ್ನು ಗೌರವಿಸಿ ಮಾನವೀಯತೆಯನ್ನು ಬೆಳೆಸುವ ವಿಶೇಷ ದಿನವಾಗಿದೆ. ಯುವಕರು ತಪ್ಪಾಗಿ ತಿಳಿದು ಆಚರಣೆ ಮಾಡುವುದು ಬೇಸರದ ಸಂಗತಿ. ಇದರ ಮೂಲ ಅರ್ಥವನ್ನು ತಿಳಿದು ಆಚರಿಸಬೇಕಾಗಿರುವ ಅನಿವಾರ್ಯತೆ ಇದೆ.

**- ಅಂತೋಣಿ ಮುತ್ತು ವಿ, ಶಿಕ್ಷಕರು, 7259675543**

## ಇತಿಹಾಸದಲ್ಲಿ ಈ ದಿನ

### ಫೆಬ್ರವರಿ-14

**1876:** ಟೆಲಿಫೋನ್ ಆವಿಷ್ಕಾರಕ ಅಲೆಕ್ಸಾಂಡರ್ ಗ್ರಾಹಂ ಬೆಲ್ ಅವರು ಟೆಲಿಫೋನ್ ಪೇಟೆಂಟ್‌ಗಾಗಿ ಅರ್ಜಿ ಸಲ್ಲಿಸಿದರು. ಇದು ಸಂವಹನ ಕ್ಷೇತ್ರದಲ್ಲಿ ಮಹತ್ವದ ತಿರುವು ನೀಡಿತು.

**1929:** ಅಮೆರಿಕಾದ ಚಿಕಾಗೋ ನಗರದಲ್ಲಿ ನಡೆದ ಕುಖ್ಯಾತ ಸೆಂಟ್ ವ್ಯಾಲೆಂಟೈನ್ಸ್ ಡೇ ಮಾರಣ ಹೋಮಟಿ ಪ್ರಕರಣವು ಗ್ಯಾಂಗ್‌ಸ್ಟರ್ ಜಗತ್ತನ್ನು ನಡುಗಿಸಿತು. ಈ ಘಟನೆಗೆ ಕುಖ್ಯಾತ ದರೋಡೆಕೋರ ಅಲ್ ಕಪೋನ್ ಹೆಸರು ಸಂಬಂಧಪಟ್ಟಿತ್ತು.

**1946:** ಜಗತ್ತಿನ ಮೊದಲ ಎಲೆಕ್ಟ್ರಾನಿಕ್ ಸಾಮಾನ್ಯ ಉದ್ದೇಶದ ಕಂಪ್ಯೂಟರ್ ಅನ್ನು ಸಾರ್ವಜನಿಕವಾಗಿ ಅನಾವರಣಗೊಳಿಸಲಾಯಿತು. ಇದು ಆಧುನಿಕ ಕಂಪ್ಯೂಟರ್ ಯುಗಕ್ಕೆ ಚಾಲನೆ ನೀಡಿತು.

**2005:** ಜನಪ್ರಿಯ ವಿಡಿಯೋ ಹಂಚಿಕೆ ತಾಣವಾದ ಸ್ಥಾಪನೆಯಾಯಿತು, ಇದು ಡಿಜಿಟಲ್ ಮಾಧ್ಯಮ ಕ್ಷೇತ್ರದಲ್ಲಿ ಕ್ರಾಂತಿ ತಂದಿತು.

**ಜನನ**

**1483:** ಮೊಘಲ್ ಸಾಮ್ರಾಜ್ಯದ ಸ್ಥಾಪಕ ಬಾಬರ್

**1819:** ಸಮಾಜ ಸುಧಾರಕ ಹಾಗೂ ಶಿಕ್ಷಣತಜ್ಞ ಈಶ್ವರಚಂದ್ರ, ವಿದ್ಯಾಸಾಗರ

**ಮರಣ**

**1975:** ಭಾರತದ ಮಾಜಿ ರಾಷ್ಟ್ರಪತಿ ಫಖ್ರುದ್ದೀನ್ ಅಲಿ ಅಹ್ಮದ್

# ಎತ್ತಿನಹೊಳೆ ಯೋಜನೆ ಪರಿಹಾರ ನೀಡುವಲ್ಲಿ ಲೋಪ: ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಎತ್ತಿನಹೊಳೆ ಯೋಜನೆಗೆ ಭೂಮಿ ನೀಡಿದ ರೈತರಿಗೆ ನೀಡಬೇಕಿದ್ದ ಸುಮಾರು 42 ಲಕ್ಷ ರೂ. ಪರಿಹಾರವನ್ನು ನಕಲಿ ದಾಖಲೆ ಸೃಷ್ಟಿಸಿದ ಪ್ರಭಾವಿ ವ್ಯಕ್ತಿಗೆ ಮಂಜೂರು ಮಾಡುವ ಮೂಲಕ ಅಧಿಕಾರಿಗಳು ಲೋಪವೆಸಗಿದ್ದಾರೆ ಎಂದು ಬೇಲೂರು ತಾಲ್ಲೂಕು ಬೆಟ್ಟದ ಆಲೂರು ಗ್ರಾಮದ ಲೋಹಿತ್ ಕುಮಾರ್ ಗಂಭೀರ ಆರೋಪ ಮಾಡಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಟ್ಟದ ಆಲೂರು ಗ್ರಾಮದ 10 ಕುಟುಂಬಗಳಿಗೆ ದಶಕಗಳ ಹಿಂದೆ ಗೋಮಾಳ ಜಾಗ ಜಮೀನು ಮಂಜೂರಾಗಿದೆ. ನಮಗೆ ಸಾಗುವಳಿ ಚೀಟಿ ನೀಡಲಾಗಿದೆಯಾದರೂ ಪಹಣಿ ಮಾಡಿಕೊಟ್ಟಿಲ್ಲ. ದಶಕಗಳಿಂದ ನಾವು ಸ್ವಾಧೀನಲ್ಲಿದ್ದೇವೆ. 2017-18ರಲ್ಲಿ ಎತ್ತಿನಹೊಳೆ ಕಾಲುವೆ ಅಳವಡಿಸುವಾಗ ಸಾಗುವಳಿ ಚೀಟಿ ಆಧಾರದಡಿ ಬೆಳೆ ಪರಿಹಾರ ನೀಡಿದ್ದಾರೆ. ಆದರೆ, ಶಾಶ್ವತ ಪರಿಹಾರ ಕಲ್ಪಿಸಿಲ್ಲ ಎಂದರು.

ಕಾನೂನು ಪ್ರಕಾರ ಭೂ ಪರಿಹಾರ ಪಡೆಯಲು ಪಹಣಿ ಇರಬೇಕು. ನಮ್ಮ ಹೆಸರಿಗೆ ಪಹಣಿ ಮಾಡಿಕೊಡುವಂತೆ ತಾಲೂಕು ಕಚೇರಿಗೆ ಭೇಟಿ ನೀಡಿದಾಗ ಅಧಿಕಾರಿಗಳು ಸ್ಪಂದಿಸಲಿಲ್ಲ. ಯೋಜನೆಗೆ ನೀಡಿರುವ ನನ್ನ 25 ಗುಂಟೆಗೆ 12 ಲಕ್ಷ ರೂ. ಪರಿಹಾರ ಕೊಡಬೇಕು. ಅದೇ ರೀತಿ ಉಳಿದ 9 ರೈತರಿಗೆ ಅನ್ಯಾಯವಾಗಿದೆ. ಅಂದಾಜು 42 ಲಕ್ಷ ರೂ.ಗಳನ್ನು ಗ್ರಾಮದ ರವಿಕುಮಾರ್ ಎಂಬಾತ ನಕಲಿ ದಾಖಲೆಗಳ ಸೃಷ್ಟಿಸಿ ಪಡೆದಿದ್ದಾನೆ. ಮೂಲ ಸ್ಕೆಚ್‌ನಲ್ಲಿ ಎತ್ತಿನಹೊಳೆ ಯೋಜನೆಗೆ ನಮ್ಮ ಭೂಮಿ ಬಳಸಿಕೊಳ್ಳಲಾಗಿದೆಯಾದರೂ ನಕಲಿ ದಾಖಲೆಗಳಲ್ಲಿ ನಮ್ಮ ಭೂಮಿಯನ್ನು ತೋರಿಸಿಲ್ಲ. ಹೀಗೆ ನಕಲಿ ದಾಖಲೆ ಸೃಷ್ಟಿಸಿ ವ್ಯಕ್ತಿಗೆ ಪರಿಹಾರ ಬಿಡುಗಡೆ ಮಾಡಿರುವುದು ಖಂಡನೀಯ ಎಂದರು. ವಾಸ್ತವವಾಗಿ ರವಿಕುಮಾರ್ ಎಂಬುವವರ ಜಮೀನು ಯೋಜನೆ ವ್ಯಾಪ್ತಿಗೆ ಸೇರಿಲ್ಲ. ಕಾಮಗಾರಿ ಸಂಬಂಧಿತ ಸಾಮಗ್ರಿ ಇರಿಸಲು ಶೆಡ್ ನಿರ್ಮಾಣಕ್ಕೆ ಅವರ ಜಾಗ ಬಳಸಿಕೊಳ್ಳಲಾಗಿತ್ತು ಎಂದು ಸುಳ್ಳು ಹೇಳಿ ಪ್ರತಿವರ್ಷ ಅದಕ್ಕೂ ಬಾಡಿಗೆ ಪಡೆದಿದ್ದಾನೆ. ಇಷ್ಟು ಮಾತ್ರವಲ್ಲದೆ ಯೋಜನೆಗೆ ತಮ್ಮದೂ ಜಾಗ ಬಳಕೆಯಾಗಿದೆ ಎಂದು ಸುಳ್ಳು ದಾಖಲೆ ಸೃಷ್ಟಿಸಿ ನೈಜ ಫಲಾನುಭವಿಗಳ ಪರಿಹಾರಕ್ಕೆ ಕನ್ನ ಹಾಕಿದ್ದಾನೆ. ಅಧಿಕಾರಿಗಳು ಸಹ ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ. ಜಿಲ್ಲಾಡಳಿತ ಇನ್ನಾದರೂ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸ್ಥಳ ಸಮೀಕ್ಷೆ ಮಾಡಿ ಅರ್ಹರಿಗೆ ಪರಿಹಾರ ಕಲ್ಪಿಸಬೇಕೆಂದು ಆಗ್ರಹಿಸಿದರು.

ಬೆಟ್ಟದ ಆಲೂರು ಗ್ರಾಮದ ಧರ್ಮೇಶ್, ಶಶಿ, ಮಂಜಯ್ಯ, ಪಾರ್ವತಮ್ಮ, ಪುಟ್ಟನಾಯಕ ಇದ್ದರು.

# ಫೆ.16 ರಂದು ರೈಲು ಸಂಚಾರ ವ್ಯತ್ಯಯ

ಹಾಸನ: ಹಬ್ಬನಘಟ್ಟ-ಅರಸೀಕೆರೆ ನಿಲ್ದಾಣಗಳ ಮಧ್ಯೆ ವಿಶ್ವೇಶ್ವರಯ್ಯ ಜಲ ನಿಗಮದ ವತಿಯಿಂದ ಎತ್ತಿನಹೊಳೆ ಯೋಜನೆ ಕಾಲುವೆ ಕ್ರಾಸಿಂಗ್ ಕಾಮಗಾರಿ ನಡೆಯುತ್ತಿರುವ ಹಿನ್ನೆಲೆ ಫೆ.16 ರಂದು ಕೆಲ ರೈಲುಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಲಿದೆ.

ಹಲವು ರೈಲುಗಳು ರದ್ದಾಗಲಿದ್ದರೆ, ಕೆಲವು ಭಾಗಶಃ ರದ್ದುಗೊಳಿಸಲಾಗಿದೆ. ಇನ್ನು ಕೆಲ ರೈಲುಗಳ ಸಂಚಾರ ಸಮಯ ಮರು ನಿಗದಿಗೊಳ್ಳಲಿದೆ. ಮತ್ತೆ ಕೆಲವು ರೈಲುಗಳನ್ನು ನಿಯಂತ್ರಿಸಲಾಗುವುದು ಎಂದು ರೈಲ್ವೆ ಇಲಾಖೆ ತಿಳಿಸಿದೆ.

**ಸಂಚಾರ ರದ್ದುಗೊಂಡ ರೈಲುಗಳು**

ರೈಲು ಸಂಖ್ಯೆ 56267 ಅರಸೀಕೆರೆ-ಮೈಸೂರು ಪ್ಯಾಸೆಂಜರ್, ರೈಲು ಸಂಖ್ಯೆ 16206 ಮೈಸೂರು-ತಾಳಗುಪ್ಪ ಎಕ್ಸ್‌ಪ್ರೆಸ್ ಹಾಗೂ ರೈಲು ಸಂಖ್ಯೆ 16205 ತಾಳಗುಪ್ಪ-ಮೈಸೂರು ಎಕ್ಸ್‌ಪ್ರೆಸ್ ರೈಲು ಸಂಚಾರವನ್ನು ರದ್ದುಗೊಳಿಸಲಾಗಿದೆ. ಇನ್ನು ರೈಲು ಸಂಖ್ಯೆ 16225 ಮೈಸೂರು-ಶಿವಮೊಗ್ಗ ಟೌನ್ ಎಕ್ಸ್‌ಪ್ರೆಸ್, ಮೈಸೂರು-ಅರಸೀಕೆರೆ ನಡುವಿನ ಸಂಚಾರವನ್ನು ಭಾಗಶಃ ರದ್ದುಪಡಿಸಲಾಗಿದೆ. ಅರಸೀಕೆರೆಯಿಂದ ನಿಗದಿತ ವೇಳೆಗೆ ಪ್ರಯಾಣ ಆರಂಭಿಸಲಿದೆ. ರೈಲು ಸಂಖ್ಯೆ 56266 ಮೈಸೂರು-ಅರಸೀಕೆರೆ ಪ್ಯಾಸೆಂಜರ್ ರೈಲು 1 ಗಂಟೆ 50 ನಿಮಿಷಗಳ ಕಾಲ ಮತ್ತು ರೈಲು ಸಂಖ್ಯೆ 16221 ತಾಳಗುಪ್ಪ-ಮೈಸೂರು ಎಕ್ಸ್‌ಪ್ರೆಸ್ ರೈಲನ್ನು 1 ಗಂಟೆ 40 ನಿಮಿಷಗಳ ಕಾಲ ಮಾರ್ಗ ಮಧ್ಯೆ ನಿಯಂತ್ರಿಸಲಾಗುತ್ತದೆ.

# ಸೇವಾ ನ್ಯೂನ್ಯತೆ: ನಂಜುಂಡಶೆಟ್ಟಿ ಸನ್ಸ್ ಹೋಂ ಅಪ್ಲೆಯನ್ಸಸ್‌ಗೆ ದಂಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಾರೆಂಟಿ ಇದ್ದರೂ ಮಿಕ್ಸಿ ರಿಪೇರಿ ಮಾಡಿಕೊಡದ ಹಾಗೂ ಹೊಸ ಮಿಕ್ಸಿ ಕೊಡದ ಕಂಪನಿಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ದಂಡ ವಿಧಿಸಿದೆ.

ನಗರದ ನಟರಾಜ ಎಂಬುವವರು ನಗರದ ಹೆಚ್.ಎನ್.ನಂಜುಂಡಶೆಟ್ಟಿ ಸನ್ಸ್ ಹೋಂ ಅಪ್ಲೆಯನ್ಸಸ್ ವಿರುದ್ಧ ದೂರು ಸಲ್ಲಿಸಿದ್ದರು. 2024ರ ನ. 19ರಂದು 4,900 ರೂ. ಪಾವತಿಸಿ ವಿ ಗಾರ್ಡ್ ಕಂಪನಿಯ ಮಿಕ್ಸಿ ಖರೀದಿಸಿದ್ದರು. 5 ವರ್ಷ ವಾರಂಟಿಯ ಮಿಕ್ಸಿ ಮೂರು ತಿಂಗಳಲ್ಲಿ ದುರಸ್ತಿಗೀಡಾಗಿತ್ತು. ನಟರಾಜ ಅವರು ರಿಪೇರಿಗಾಗಿ ಹೋಂ ಅಪ್ಲೆಯನ್ಸಸ್‌ಗೆ ತೆರಳಿದಾಗ ಸಿದ್ದಗಂಗಾ ಸರ್ವಿಸ್ ಸೆಂಟರ್‌ನಲ್ಲಿ ರಿಪೇರಿ ಮಾಡಿಸಿಕೊಡಲಾಗಿತ್ತು. ಆದರೆ, ನಾಲ್ಕು ತಿಂಗಳಲ್ಲಿ ಅದೇ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಮತ್ತೊಮ್ಮೆ ಬಂದಾಗ ಅಪ್ಲೆಯನ್ಸಸ್‌ನವರು ಸಕಾರಾತ್ಮಕವಾಗಿ ಸ್ಪಂದಿಸಿರಲಿಲ್ಲ. ಅದರಿಂದ ಬೇಸತ್ತ ನಟರಾಜ ಅವರು ಸೇವಾ ನ್ಯೂನ್ಯತೆ ಉಂಟಾಗಿದೆಯೆಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ 2025ರ ನ. 13 ರಂದು ದೂರು ಸಲ್ಲಿಸಿದ್ದರು.

ಆಯೋಗ ನಡೆಸಿದ ವಿಚಾರಣೆಯಲ್ಲಿ ಮಾರಾಟ ಕಂಪನಿಯು ತಮ್ಮಿಂದ ಯಾವುದೇ ಲೋಪವುಂಟಾಗಿಲ್ಲವೆಂದು ಸಮರ್ಥಿಸಿಕೊಂಡಿತ್ತು. ಆದರೆ, ರಿಪೇರಿ ಜವಾಬ್ದಾರಿ ವಹಿಸಿಕೊಂಡಿದ್ದವರು ನೋಟಿಸ್‌ಗೆ ಹಾಜರಾಗದ ಕಾರಣ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಯಿತು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಸಿ.ಎಂ.ಚಂಚಲ, ಸದಸ್ಯೆ ಆರ್. ಅನುಪಮ ಪೀಠವು ಪ್ರಕರಣದ ವಿಚಾರಣೆ ನಡೆಸಿ 45 ದಿನಗಳೊಳಗೆ ಅದೇ ಬ್ರಾಂಡ್‌ನ ಹೊಸ ಮಿಕ್ಸಿ ಅಥವಾ ಅದರ ಮೊತ್ತ ಪಾವತಿಸಬೇಕು. ಸೇವಾ ನ್ಯೂನ್ಯತೆಗಾಗಿ 2 ಸಾವಿರ ರೂ., ಮಾನಸಿಕ ಹಿಂಸೆಗಾಗಿ 1 ಸಾವಿರ ರೂ. ಮತ್ತು ಫಿರ್ಯಾದಿ ಶುಲ್ಕ 1 ಸಾವಿರ ರೂ. ನೀಡಬೇಕೆಂದು ಆದೇಶಿಸಿದೆ.

# ಅಕ್ರಮ ಮರಳು ಗಣಿಗಾರಿಕೆ ಅಡ್ಡೆ ಮೇಲೆ ದಾಳಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಹೆನ್ನಲಿ ಗ್ರಾಮದಲ್ಲಿ ಅಕ್ರಮವಾಗಿ ಮರಳು ಶೇಖರಣೆ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿಯ ಮೇರೆಗೆ ತಹಶೀಲ್ದಾರ್ ಸುಪ್ರೀತಾ ಅವರ ನೇತೃತ್ವದಲ್ಲಿ ಕಂದಾಯ ಹಾಗೂ ಪೊಲೀಸ್ ಅಧಿಕಾರಿಗಳ ತಂಡ ದಾಳಿ ನಡೆಸಿ ಏಳು ಟಿಪ್ಪರ್ ಸಾಮರ್ಥ್ಯದ ಮರಳನ್ನು ವಶಪಡಿಸಿಕೊಂಡ ಘಟನೆ ನಡೆದಿದೆ. ತಾಲೂಕಿನ ವಿವಿಧೆಡೆ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿದೆ ಎಂಬ ಸಾರ್ವಜನಿಕ ದೂರುಗಳ ಹಿನ್ನೆಲೆಯಲ್ಲಿ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದರು. ಸ್ಥಳದಲ್ಲಿ ಅಕ್ರಮವಾಗಿ ಶೇಖರಿಸಿದ್ದ ಮರಳನ್ನು ವಶಕ್ಕೆ ಪಡೆದು ತಾಲ್ಲೂಕು ಕಚೇರಿ ಸಮೀಪ ಸುರಿಯಲಾಗಿದೆ.



ತಹಶೀಲ್ದಾರ್ ಸುಪ್ರೀತಾ ಮಾತನಾಡಿ, ಸರ್ಕಾರದ ಅನುಮತಿ ಇಲ್ಲದೆ ಮರಳು ಶೇಖರಣೆ ಮಾಡುವುದು ಕಾನೂನು ಬಾಹಿರವಾಗಿದ್ದು, ಇಂತಹ ಚಟುವಟಿಕೆಗಳಲ್ಲಿ ತೊಡಗಿರು ವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು. ಅಲ್ಲದೆ ಅಕ್ರಮವಾಗಿ ಪಡೆದುಕೊಂಡ ಮರಳನ್ನು ಬಳಸಿ ಕಟ್ಟಡ ಕಾಮಗಾರಿ ನಡೆಸುತ್ತಿರುವುದು ಕಂಡುಬಂದರೆ, ಸಂಬಂಧಿಸಿದ ಕಟ್ಟಡ ಮಾಲೀಕರ ಮೇಲೆಯೂ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ನಗರ ಪೊಲೀಸ್ ಇನ್ಸ್‌ಪೆಕ್ಟರ್ ವನರಾಜು, ಕಂದಾಯ ನಿರೀಕ್ಷಕ ದಾನ್ ಪ್ರಕಾಶ್ ಹಾಗೂ ಗ್ರಾಮಾಧಿಕಾರಿ ಶಿಲ್ಪ ಸೇರಿ ಸಿಬ್ಬಂದಿ ಪಾಲ್ಗೊಂಡಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248